ನೂರರಷ್ಟು ಅನುದಾನವನ್ನು ಸರ್ಕಾರವೇ ಭರಿಸುತ್ತಿರುವುದರಿಂದ ಯಾವುದೇ ಕಷ್ಟನಷ್ಟ ಆಗುವುದಿಲ್ಲ. ಒಂದು ವೇಳೆ ಪುನಃ ಸಂಸ್ಥೆಯು ಆಡಳಿತವನ್ನು ಖಾಸಗಿ ಸಂಸ್ಥೆಯವರಿಗೆ ನೀಡಿದಲ್ಲಿ, ಎನ್.ಎ.ಬಿ. ಸಂಸ್ಥೆಯ ಸಮಸ್ಯೆಗಳು ಪುನರಾವರ್ತನೆ ಆಗುವ ಸಂದರ್ಭಗಳೇ ಹೆಚ್ಚೆಂದು ಅಭಿಪ್ರಾಯಪಡಲಾಗಿದೆ.

ಶೇಕಡ 100 ರಷ್ಟು ಅನುದಾನ ಸರ್ಕಾರವೇ ಭರಿಸಿದರೆ ನಿರ್ವಹಣೆಗೆ ಯಾವುದೇ ಕಷ್ಟನಷ್ಟ ಆಗುವುದಿಲ್ಲ. ಒಂದು ವೇಳೆ, ಈ ಲೈನನ್ನು ತಮ್ಮ ಗಮನಕ್ಕೆ ತರುವುದು, ಪುನಃ ಸಂಸ್ಥೆಯು ಆಡಳಿತವನ್ನು ಖಾಸಗಿ ಸಂಸ್ಥೆಯವರಿಗೆ ನೀಡಿದಲ್ಲಿ ಎನ್.ಎ.ಬಿ. ಸಂಸ್ಥೆಯ ಹಾಗೂ ಪುನಃ ಸಮಸ್ಯೆಗಳು ಪುನರಾವರ್ತನೆ ಆಗುವ ಸಂದರ್ಭಗಳು ಹೆಚ್ಚೆಂದು ಅಭಿಪ್ರಾಯ ಪಡಲಾಗಿದೆ. ಅಂದರೆ ಖಾಸಗಿಯವರಿಗೆ ವಹಿಸಿದರೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಖಾಸಗಿಯವರು ಕೂಡ ತಮಗೆ ಎರಡೆರಡು ಬಾರಿ ತಾವು ಬೇರೆ ಆಲ್ಟರ್ನೇಟಿವ್ ಮಾಡಿಕೊಳ್ಳಿ ಬೇರೆ ಆಲ್ಟರ್ನೇಟಿವ್ ಮಾಡಿಕೊಳ್ಳಿ ಎಂದು ಪತ್ರ ಬರೆಯುತ್ತಾರೆ. ಆದರೂ ನೀವು ಅವರೇ ಮಾಡಬೇಕೆಂದು ಒತ್ತಾಯ ಏತಕ್ಕೆ ಹಾಕುತ್ತಿದ್ದೀರಿ? ಇಲ್ಲಿ ಒಂದೇ ನನ್ನ ಸಲಹೆ. ಇದು ಅಂಧರ ಕೇಂದ್ರ. ಸಚಿವರು ಅಂಧರಾಗಿ ಉತ್ತರವನ್ನು ನೀಡಬಾರದು. ದಯವಿಟ್ಟು ತೆರೆದ ಕಣ್ಣಿನಿಂದ ಉತ್ತರ ನೀಡಬೇಕು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಮಾನ್ಯ ಸಭಾಧ್ಯಕ್ಷರೆ, ಅವು ಆಮೇಲೆ ಒಪ್ಪಿಕೊಂಡಿದ್ದಾರೆ. ಮೊದಲು ಏತಕ್ಕೆ ಒಪ್ಪಲಿಲ್ಲ ಎಂದರೆ ನಾವು ಶೇಕಡ 100 ರಷ್ಟು ಅನುದಾನ ಕೊಡುತ್ತಾ ಇರಲಿಲ್ಲ. ನಮಗೆ ಕಡಿಮೆಯಾಗುತ್ತದೆ, ಯಾವುದೇ ರೀತಿ ಆಗುವುದಿಲ್ಲ ಎಂದು ಹೇಳಿದ್ದರು. ಅದಕ್ಕೆ ಈಗ ಕೊಡುತ್ತಿದ್ದೇವೆ. ಆದ್ದರಿಂದ ಅದು ಬಹಳ ಚೆನ್ನಾಗಿ ನಡೆದುಕೊಂಡು ಹೋಗ್ಥುತ್ತಾ ಇದೆ.

ಶ್ರೀ ಬಿ. ಮುನಿಯಪ್ಪ : ಒಂದು ಖಾಸಗಿ ಸಂಸ್ಥೆಯವರು ಒಳ್ಳೆಯ ರೀತಿಯಲ್ಲಿ ಈ ಅಂಧ ಮಕ್ಕಳಿಗೆ ತೃಪ್ತಿಕರವಾಗಿ ನೆಡಸುತ್ತಿದ್ದಾರೆ ಎಂದು ಮಂತ್ರಿಗಳು ಹೇಳಿರುವುದು ಸಂತೋಷ. ಆದೇ ಸಂದರ್ಭದಲ್ಲಿ ಒಂದು ಸಂಸ್ಥೆ, ಸಮಾಜದಲ್ಲಿ ಯಾವ ಸಂಸ್ಥೆ ಬೇಕಾದರೂ ನಡೆಸಬಹುದು, ಆದರೆ ಅಂಧಮಕ್ಕಳ ವಿಚಾರವಾಗಿ ಪ್ರಾಮಾಣಿಕವಾಗಿ ಆಸಕ್ತಿ ಇಲ್ಲದೇ ನಡೆಸಿದರೆ, ಅದರಿಂದ ಆ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಆ ಸಂಸ್ಥೆಯನ್ನು ಬಲವಂತವಾಗಿ ನೀವು ನಡೆಸಿ ಎಂದು ಕೇಳಿಕೊಳ್ಳುವ ಪರಿಸ್ಥಿತಿ ಬಂದರೆ, ಅವರು ಪ್ರಾಮಾಣಿಕವಾಗಿ ಅಂಧಮಕ್ಕಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸಚಿವರು ಹೇಳಿದಹಾಗೆ ಆಮೇಲೆ ಒಪ್ಪಿಕೊಂಡರು ಅಂದರೆ ಬಲವಂತಕ್ಕೆ ಒಪ್ಪಿಕೊಳ್ಳುವುದು ಬೇರೆ, ಪ್ರಾಮಾಣಿಕವಾಗಿ ತೆರೆದ ಮನಸ್ಸಿನಿಂದ ಮಾಡುವಂಥದ್ದು ಬೇರೆ. ತೆರೆದ ಮನಸ್ಸಿನಿಂದ ಆ ಮಕ್ಕಳ ಬಗ್ಗೆ ಅನುಕಂಪದಿಂದ ಅವರು ಮಾಡುವುದಾದರೆ ಮುಂದುವರೆಸಲಿ, ಇಲ್ಲ ಅಂದರೆ ಸರ್ಕಾರ ತೆಗೆದುಕೊಳ್ಳಲಿ.

ಅಧ್ಯಕ್ಷರು : 100 ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದಮೇಲೆ ಒಪ್ಪಿಕೊಂಡಿದ್ದಾರಂತೆ. ಆದ್ದರಿಂದ ಸಮಸ್ಯೆ ಬಗೆಹರಿದಿದೆ.

ಬೊಮ್ಮಸಂದ್ರದಲ್ಲಿ ಕೈಗಾರಿಕಾಭಿವೃದ್ಧಿ ಮಂಡಲಿಯಿಂದ ಹಂಚಲಾದ ನಿವೇಶನಗಳ ಬಗ್ಗೆ.

343 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಲಿಯಿಂದ ಬೊಮ್ಮಸಂದ್ರದಲ್ಲಿ ಹಂಚಲಾದ ನಿವೇಶನಗಳೆಷ್ಟು?*

ಆ) *ಇವುಗಳಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳೆಷ್ಟು?*

ಇ) *ಕೆಲವರು ಕೇವಲ ಶೆಡ್ಡುಕಟ್ಟಿ ಕೈಗಾರಿಕೆಯನ್ನು ಸ್ಥಾಪಿಸಿದರೆ ಬಾಡಿಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಈ) *ಹಾಗಿದ್ದಲ್ಲಿ ನಿಯಮಗಳ ಪಾಲನೆ ಮಾಡದವರ ಮೇಲೆ ಸರ್ಕಾರದವರು ಕೈಗೊಳ್ಳಲಾದ ಕ್ರಮಗಳೇನು?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಈವರೆಗೂ 525 ನಿವೇಶನಗಳು ಹಂಚಲಾಗಿದೆ.

ಆ) 412.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ಈ ಮೊಮ್ಮಸಂದ್ರ ಕೈಗರಿಕಾ ಪ್ರದೇಶದಲ್ಲಿ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಎಂದು ಕೇಳಿದ್ದಕ್ಕೆ ಉತ್ತರವನ್ನು ಹೇಳಿದ್ದಾರೆ. ಇವುಗಳಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳನ್ನು ಕೂಡ ಹೇಳಿದ್ದಾರೆ. ಕೆಲವರು ಕೆಲವು ಶೆಡ್‌ಗಳನ್ನು ಕಟ್ಟಿ ಬೇರೆಯವರಿಗೆ ಬಾಡಿಗೆಗೆ ಕೊಟ್ಟಿದ್ದಾರೆಯೇ ಎಂದು ಕೇಳಿದಾಗ ಇಲ್ಲ ಎಂದು ಹೇಳಿದ್ದಾರೆ. ಸನ್ಮಾನ್ಯ ಕೈಗಾರಿಕಾ ಸಚಿವರು ತುಂಬಾ ಧಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ಅದನ್ನು ಒಂದು ಸಾರಿ ತರಸಿ ತಾವು ನೋಡಬೇಕು. ಬೊಮ್ಮಸಂದ್ರದಲ್ಲಿರತಕ್ಕ ಬಹುತೇಕ ಕೈಗಾರಿಕಾ ಶೆಡ್ಡುಗಳನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಾರೆ. ಮತ್ತೆ ಕೆಲವರಿಗೆ ಅಲಾಟ್ ಆಗಿ ಸುಮಾರು ವರ್ಷಗಳಾಗಿವೆ ಆದರೆ, ಅಲ್ಲಿ ಶೆಡ್ಡುಗಳನ್ನು ಕಟ್ಟುತ್ತಿಲ್ಲ. ಮತ್ತೆ ಆ ರೀತಿ ಒಂದು ಎರಡು ಶೆಡ್ಡುಗಳನ್ನು ಏನಾದರೂ ಬೇರೆ ಬೇರೆಯವರ ಹೆಸರಿಗೆ ಬೇನಾಮಿ ಹೆಸರಿಗೆ ಮಾಡಿಸಿಕೊಂಡಿದ್ದರೆ, ತಕ್ಷಣ ಅಲಾಟಮೆಂಟ್‌ನ್ನು ಕಿತ್ತುಹಾಕಿ ಬೇರೆ ಯಾರಿಗಾದರೂ ಕೊಡುವುದು ಒಳ್ಳೆಯದು. ಅದಕ್ಕೆ ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಉತ್ತರವನ್ನು ಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ನಿವೇಶನಕ್ಕೆ ಅವರು ಹಣ ತುಂಬಿದ ನಂತರ ಅದು ಅವರಿಗೆ ಹಸ್ತಾಂತರ ಆದನಂತರ ಅವರು ಎರಡು ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಒಂದು ವೇಳೆ ಎರಡು ವರ್ಷದೊಳಗೆ ಪ್ರಾರಂಭ ಮಾಡಿಲ್ಲ ಅಂದರೆ, ಕೆಲವು ಪವರ್ ಸ್ಯಾಂಕ್ಷನ್ ಮತ್ತು ಕೈಗಾರಿಕಾ ಬಿಲ್ಡಿಂಗ್ ಕಟ್ಟುವುದಕ್ಕೆ ಟೈಮ್ ತೆಗೆದುಕೊಂಡರೆ, ನಾವು ಸ್ವಲ್ಪ ಎಕ್ಸಟೆನಷನ್ ಕೊಡುತ್ತೇವೆ. ಅದು ಮಾಡದಿದ್ದರೆ ಅದನ್ನೂ ಕ್ಯಾನ್ಸಲ್ ಮಾಡುತ್ತೇವೆ. ಮಾನ್ಯ ಸದಸ್ಯರು ಕೆಲವು ಜನ ಕೈಗಾರಿಕಾ ಶೆಡ್ಡುಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ನನ್ನ ಗಮನಕ್ಕೆ ಬಂದಿಲ್ಲ. ಆ ವಿಚಾರವಾಗಿ ನಾನು ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರು ಅವರ ಗಮನಕ್ಕೆ ಬಂದಿದ್ದನ್ನು ನಮ್ಮ ಗಮನಕ್ಕೆ ತಂದರೆ, ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಉತ್ತರವನ್ನು ನಂತರ ತರಿಸಿಕೊಡುತ್ತೇನೆ.

ಶಿರಾ ಟೌನ್‌ಗೆ ಕುಡಿಯುವ ನೀರು ಸರಬರಾಜು

345 - ಶ್ರೀ ಬಿ. ಸತ್ಯನಾರಾಯಣ (ಶಿರಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ಟೌನನಲ್ಲಿ ಕುಡಿಯುವ ನೀರಿನ ಬವಣೆ ಇರೋದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಟೌನಿನಲ್ಲಿನ ನೀರಿನ ಬವಣೆಯನ್ನು ನೀಗಿಸಲು ಪಕ್ಕದ ಗುಬ್ಬಿ ತಾಲ್ಲೂಕಿನಲ್ಲಿ ಹರಿಯುವ ಹೇಮಾವತಿ ನಾಲೆಯಿಂದ ಕಳ್ಳಂಬೆಳ್ಳ ಮತ್ತು ಶಿರಾ ಕೆರೆಗಳಿಗೆ ನೀರು ಬಿಟ್ಟು ಶಾಶ್ವತವಾಗಿ ಬವಣೆ ನೀಗಿಸಲು ಕ್ರಮ ಕೈಗೊಳ್ಳುವುದರಲ್ಲಿ ಇರುವ ತೊಂದರೆಯೇನು?

ಇ) ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಪ್ರಥಮವಾಗಿ ನೀರಾವರಿ ಇಲಾಖೆಯವರನ್ನು ಸಂಪರ್ಕಿಸಿ ತಾಂತ್ರಿಕ ಸಾಧ್ಯತೆ ಬಗ್ಗೆ ಪರಿಶೀಲಿಸಿ ನಂತರ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಇ) ತಾಂತ್ರಿಕ ಸಾಧ್ಯತೆ ಅವಲಂಭಿಸಿ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಶಿರಾ ನಗರ ಸುಮಾರು 35,000ಕ್ಕೂ ಹೆಚ್ಚಿನ ಸಂಖ್ಯೆ ಇರತಕ್ಕ ಪಟ್ಟಣ. ಈ ಪಟ್ಟಣದಲ್ಲಿ ಸತತವಾಗಿ ಕುಡಿಯುವ ನೀರಿಗೆ ತೊಂದರೆಯಾಗಿ ಕೇವಲ ಬೋರವೆಲಗಳ ಆಶ್ರಯದಿಂದ ವಾರಕ್ಕೆ, 8 ದಿವಸಕ್ಕೆ ಒಮ್ಮೆ ನೀರನ್ನು ಕುಡಿಯತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ಹಿಂದಿನ ಸರ್ಕಾರದಲ್ಲಿ ಸಹ ನಾವು ಮನವಿ ಮಾಡಿಕೊಂಡರೂ ಸಹ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಶಾಶ್ವತವಾಗಿ ಕುಡಿಯುವ ನೀರಿನ ಬವಣೆಯನ್ನು ನೀಗಿಸತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ. ಹೇಮಾವತಿ ಜಲಾಶಯ ಶಿರಾ ತಾಲ್ಲೂಕಿನ ಪಕ್ಕದಲ್ಲಿ ಚಾನಲ್ಲಾಗಿ ಹರಿಯುತ್ತಿದೆ. ಚೇಳೂರು ಪಕ್ಕ ಒಂದು ಕಿಲೋಮೀಟರ್ ಹತ್ತಿರದಲ್ಲೇ ಹೋಗುತ್ತಾ ಇರುವುದರಿಂದ ನಗರದ ಹತ್ತಿರದ ಕೆರೆಗೆ ನೀರನ್ನು ಹರಿಸಿ ಆ ಮೂಲಕ ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದೆ. ಇದರ ಬಗ್ಗೆ ನೀರಾವರಿ ಇಲಾಖೆಯವರನ್ನು ಸಂಪರ್ಕಿಸಿ ಪರಿಶೀಲಿಸುತ್ತೇನೆ ಎಂದು ಹೇಳುತ್ತಿದ್ದಾರೆ. ಇದು ನಿಖರವಾದ ಉತ್ತರ ಅಲ್ಲ. ಅತ್ಯಂತ ಆದ್ಯತೆಯನ್ನು ಕೊಟ್ಟು ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ನಮ್ಮ ಸರ್ಕಾರ ಗಮನಕೊಡಬೇಕು. ಮತ್ತು ನಿಖರವಾದ ಉತ್ತರವನ್ನು ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.